**Code No. 16 X**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರವೀಣ ದರ್ಜೆ – ಪ್ರಥಮ ಪತ್ರಿಕೆ

# (ವೇಗ)

ಜನವರಿ, 2018

ವೇಳೆ { ಉಕ್ತಲೇಖನ : 7 ನಿಮಿಷಗಳು
ಲಿಪಿ ಬರಹ : 1 ಗಂಟೆ 45 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಅವರ ಶೀಘ್ರಲಿಪಿಯನ್ನು ಕನ್ನಡ ಲಿಪಿಗೆ ಪರಿವರ್ತನೆ ಮಾಡಿ ಬರೆಯಲು ಸೂಚಿಸತಕ್ಕದ್ದು.

---

ಮಾನ್ಯರೇ,

ರಾಜ್ಯದ ಎಲ್ಲ ಮಾಧ್ಯಮ ಶಾಲೆಗಳಲ್ಲೂ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗೆ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸುವುದನ್ನು ಕಡ್ಡಾಯಗೊಳಿಸಿ
$\frac{1}{4}$ ರಾಜ್ಯ ಸರ್ಕಾರ ಆದೇಶ/ ಹೊರಡಿಸಿದೆ. ಆದರೆ, ಈ ಆದೇಶವನ್ನು ಪಾಲಿಸಲು ಸಾಧ್ಯವೇ ಇಲ್ಲ ಎಂದು ಹೇಳುವ ಮೂಲಕ ಖಾಸಗಿ ಶಾಲೆಗಳು ರಾಜ್ಯ ಸರ್ಕಾರಕ್ಕೆ ಸಡ್ಡು ಹೊಡೆದಿವೆ.

ರಾಜ್ಯದ ಯಾವ ಯಾವ ಶಾಲೆಗಳಲ್ಲಿ
$\frac{1}{2}$ ಎರಡು ಸಾವಿರದ ಹದಿನೈದು ಮ/ತ್ತು ಹದಿನಾರನೇ ಸಾಲಿನಿಂದ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸಲು ಪ್ರಾರಂಭಿಸುವುದಿಲ್ಲವೋ ಅಂತಹ ಶಾಲೆಗಳಲ್ಲಿ ಎರಡು ಸಾವಿರದ ಹದಿನೇಳು ಮತ್ತು ಹದಿನೆಂಟನೇ ಸಾಲಿನಿಂದ ಕಡ್ಡಾಯವಾ/ಗಿ $\frac{3}{4}$
ಕನ್ನಡ ಕಲಿಸುವಂತೆ ಸರ್ಕಾರದ ಪ್ರಾಥಮಿಕ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿಯವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ. ಈ ಕುರಿತು ಎರಡು ಸಾವಿರದ ಹದಿನೇಳನೇ ಅಕ್ಟೋಬರ್ ಇಪ್ಪತ್ತೊಂದXರಂದು ವಿಶೇಷ ರಾಜ್ಯ 1
ಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ಒಂದನೇ

[ Turn over

ತರಗತಿಯಿಂದ ಹತ್ತನೇ ತರಗತಿವರೆಗೆ ಹಂತ
$\frac{1}{4}$ ಹಂತವಾಗಿ ಕನ್ನಡ ಕಲಿಸುವುದನ್ನು ಕಡ್ಡಾಯ/
ಗೊಳಿಸಲಾಗಿದೆ. ಇನ್ನು ಹೊರ ರಾಜ್ಯಗಳಿಂದ
ವಲಸೆ ಬಂದು ಎರಡನೇ ತರಗತಿಯಿಂದ
ಎಂಟನೇ ತರಗತಿಯವರೆಗೆ ಪ್ರವೇಶ ಬಯಸುವ
ವಿದ್ಯಾರ್ಥಿಗಳಿಗೆ ಮೊದಲ ವರ್ಷ ಒಂದನೇ
$\frac{1}{2}$ ತರಗತಿಗೆ ನಿಗದಿಪಡಿಸಿರುವ ಕ/ನ್ನಡ ಭಾಷಾ
ಪಠ್ಯಕ್ರಮ ಬೋಧಿಸಬೇಕು ಎರಡು ಮತ್ತು
ನಂತರದ ವರ್ಷಗಳಲ್ಲಿ ಎರಡನೇ ತರಗತಿ
ಮತ್ತು ಅನುಕ್ರಮವಾಗಿ ಮೇಲಿನ ತರಗತಿಗಳ
ಪಠ್ಯಕ್ರಮಗಳನ್ನು ಬೋಧಿಸಲು ಸೂಚಿಸಲಾಗಿದೆ.
$\frac{3}{4}$ ಒಂಬತ್ತು ಮತ್ತು ಹ/ತ್ತನೇ ತರಗತಿಗೆ
ಸೇರುವ ಹೊರ ರಾಜ್ಯಗಳ ವಿದ್ಯಾರ್ಥಿಗಳಿಗೆ
ಪಠ್ಯಪುಸ್ತಕಗಳನ್ನು ನಿಗದಿಪಡಿಸಲು ಕರ್ನಾಟಕ
ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ
ಸೂಚಿಸಲಾಗಿದೆ.

ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು
2 ತಮ್ಮX ವ್ಯಾಪ್ತಿಯಲ್ಲಿರುವ ಶಾಲೆಗಳಲ್ಲಿ ಕನ್ನಡ
ಭಾಷೆ ಕಲಿಕೆ ಆದೇಶದ ಜಾರಿ ಸಂಬಂಧ
ಶಾಲಾವಾರು ಪ್ರತ್ಯೇಕ ವರದಿಗಳನ್ನು
ಸಿದ್ಧಪಡಿಸಬೇಕು. ಈ ವರದಿಗಳನ್ನು
ಪ್ರತ್ಯೇಕವಾಗಿ ಸಂಬಂಧಿಸಿದ ಸಕ್ಷಮ
ಪ್ರಾಧಿಕಾರಿಗಳಿಗೆ/ ಉಪ ನಿರ್ದೇಶಕರ $\frac{1}{4}$
ಮೂಲಕ ಸಲ್ಲಿಸಬೇಕು ಎಂದು ಆದೇಶಿಸಲಾಗಿದೆ.
ಕನ್ನಡ ಭಾಷೆಯನ್ನು ಕಡ್ಡಾಯವಾಗಿ
ಜಾರಿಗೊಳಿಸದ ಶಾಲೆಗಳ ವಿರುದ್ಧ ಬರುವ
ದೂರುಗಳನ್ನು ಸಕ್ಷಮ ಪ್ರಾಧಿಕಾರಿಯು
ವಿಚಾರಣೆ ನಡೆಸಲಿದ್ದಾರೆ./ ಈ ಅಧಿಕಾರಿ $\frac{1}{2}$
ನಿರ್ದಿಷ್ಟ ಶಾಲೆಗೆ ಭೇಟಿ ನೀಡಿ ದಾಖಲೆಗಳನ್ನು
ಪರಿಶೀಲಿಸಿ ನೋಟಿಸ್ ಜಾರಿಗೊಳಿಸುವ
ಮೂಲಕ ಕ್ರಮ ಜರುಗಿಸುವ ಅಧಿಕಾರ
ಹೊಂದಿದ್ದಾರೆ. ಕನ್ನಡ ಭಾಷೆ ಬೋಧಿಸದ
ಶಾಲೆಗಳಿಗೆ ನೋಟಿಸ್ ನೀಡಿದ ಮೂವ/ತ್ತು $\frac{3}{4}$
ದಿವಸಗಳೊಳಗಾಗಿ ಈ ಅಧಿಕಾರಿ ವಿಚಾರಣೆ
ನಡೆಸಬೇಕು. ಒಂದು ವೇಳೆ ಕನ್ನಡ ಭಾಷಾ
ಕಲಿಕೆ ಅಧಿನಿಯಮ ಎರಡು ಸಾವಿರದ
ಹದಿನೈದು ಉಲ್ಲಂಘಿಸಿದ ಆರೋಪ
ಸಾಬೀತಾದರೆ ಕ್ರಮ ಜರುಗಿಸುವ
ಅಧಿಕಾರXವನ್ನೂ ಈ ಅಧಿಕಾರಿಗಳಿಗೆ 3
ನೀಡಲಾಗಿದೆ.

ಇನ್ನೂ ವಿಧಾನಸೌಧ ವಜ್ರ
ಮಹೋತ್ಸವದ ಬಗ್ಗೆ ಹೇಳಬೇಕೆನ್ನುವುದು ನನ್ನ
ಬಯಕೆಯಾಗಿದ್ದು, ವಿಧಾನಸೌಧ ನಿರ್ಮಾಣದ

ಹಿಂದಿನ ಪ್ರೇರಣೆ ಬಹಳ ಮುಖ್ಯ. ರಾಜಪ್ರಭುತ್ವ
$\frac{1}{4}$ ಬಂದಾಗ ಅ/ದರ ಸಂಕೇತವಾಗಿರಲು ಈ
ಕಟ್ಟಡ ನಿರ್ಮಿಸಲು ಕೆಂಗಲ್ ಹನುಮಂತಯ್ಯ
ಮುಂದಾದರು. ಮಹಾರಾಜರ ಅರಮನೆಗಿಂತ
ಜನರ ಅರಮನೆ ವಿಶಾಲವಾಗಿರಬೇಕು.
ಮಹಾರಾಜರ ವೈಭವವನ್ನು ಮೀರಿಸುವಂತಹ
$\frac{1}{2}$ ವಿಧಾನಸೌ/ಧವಿರಬೇಕು ಎನ್ನುವುದು ಅವರ
ಕಲ್ಪನೆಯಾಗಿತ್ತು. ದೇಶದ ಸಂಸ್ಕೃತಿ, ಪರಂಪರೆಗೆ
ಈ ಕಟ್ಟಡ ಕನ್ನಡಿ ಹಿಡಿಯುವಂತಿರಬೇಕು
ಎನ್ನುವುದೂ ಅವರ ಅಪೇಕ್ಷೆಯಾಗಿತ್ತು.
ಭಾಷಾವಾರು ಪ್ರಾಂತ್ಯದ ಬದಲು ಉತ್ತರ,
$\frac{3}{4}$ ದಕ್ಷಿಣ, ಪೂರ್ವ,/ ಪಶ್ಚಿಮವನ್ನು
ಕೇಂದ್ರವಾಗಿಸಿಕೊಂಡು ಭಾರತದ ಆಡಳಿತ
ನಡೆಸಬೇಕು ಎಂಬ ಚರ್ಚೆಯೂ ಆ ಕಾಲದಲ್ಲಿ
ಜಾರಿಯಲ್ಲಿತ್ತು. ಹಾಗಾಗಿ ದಕ್ಷಿಣ ಭಾರತಕ್ಕೆ
ಬೆಂಗಳೂರು ಕೇಂದ್ರ ಸ್ಥಾನವಾಗಬೇಕು
4 ವಿಧಾನಸೌಧದಂತಹ ಕಟ್ಟಡವಿXದ್ದರೆ ಇದು
ಸುಲಭವೆನ್ನುವ ವಿಶ್ವಾಸ ಅವರದಾಗಿತ್ತು.
ಶಾಸಕಾಂಗ ಸಚಿವಾಲಯ ಬೇರೆ ಬೇರೆ
ಸ್ಥಳದಲ್ಲಿದ್ದರೆ ಅನಾನುಕೂಲವಾಗುತ್ತದೆ ಎಲ್ಲವೂ
ಒಂದು ಕಡೆಯಿರುವ ಕಟ್ಟಡ ನಿರ್ಮಾಣಕ್ಕೆ
ಕಾರಣರಾದರು ಅವರಂತಹ/ ದೂರದೃಷ್ಟಿಯ $\frac{1}{4}$
ನಾಯಕರು ಸಿಗುವುದು ವಿರಳ.

ವಿಧಾನಸೌಧದ ವಿಚಾರಕ್ಕೆ ಬಂದಾಗ,
ಕಟ್ಟಡ ಮತ್ತು ಈ ಸೌಧವನ್ನು ನಿರ್ಮಿಸಿದವರ
ಬಗ್ಗೆ ವಿವರವಾಗಿ ಮಂಥನ ಮಾಡಬೇಕಾಗುತ್ತದೆ.
ಕೆಂಗಲ್ ಹನುಮಂತಯ್ಯ ಅವರ ವ್ಯಕ್ತಿ/ತ್ವ $\frac{1}{2}$
ಎಲ್ಲ ರಾಜಕಾರಣಿಗಳಲ್ಲೂ ಇರುವುದಿಲ್ಲ.
ಅವರ ದೂರದರ್ಶಿತ್ವವೂ ದೊಡ್ಡದು. ದೇಶಕ್ಕೆ
ಸಾವಿರದ ಒಂಬೈನೂರು ನಲವತ್ತೇಳರಲ್ಲಿ
ಸ್ವಾತಂತ್ರ್ಯ ಬಂದರೂ ರಾಜ್ಯದಲ್ಲಿನ್ನೂ
ಪ್ರಜಾಪ್ರಭುತ್ವವಿತ್ತು. ಪ್ರಜಾಪ್ರಭುತ್ವದ ಸ್ಥಾಪನೆಗೆ
ಮೈ/ಸೂರು ಚಲೋ ನಡೆಸಲಾಯಿತು. ಅದರಲ್ಲಿ $\frac{3}{4}$
ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ ಸೇರಿ
ಹಲವರು ಮುಂಚೂಣಿಯಲ್ಲಿದ್ದರು. ಪ್ರಜಾರಾಜ್ಯ
ಸ್ಥಾಪನೆಯ ನೆನಪಿಗೆ ಇಂತಹ ಸೌಧ
ಮುಖ್ಯವೆನ್ನುವುದು ಕೆಂಗಲ್ ಅವರ ಕನಸಾಗಿತ್ತು.
ಎರXಡು ಕೋಟಿ ರೂಪಾಯಿಗಿಂತಲೂ ಕಡಿಮೆ 5
ವೆಚ್ಚದಲ್ಲಿ ಕಟ್ಟಡವನ್ನು ಅವರು ನಿರ್ಮಿಸಿ
ಕೊಟ್ಟರು. ಆಡಳಿತದಲ್ಲೂ ನಮ್ಮ ಸಂಸ್ಕೃತಿ
ಇರಬೇಕೆಂದು ಸರ್ಕಾರದ ಕೆಲಸ ದೇವರ
ಕೆಲಸವೆಂದು ಬರೆಸಲಾಯಿತು. ಇಂತಹ ಭವ್ಯ
ಕಟ್ಟ/ಡವನ್ನು ಈಗ ನಿರ್ಮಿಸುವುದಾದರೆ ಐದು $\frac{1}{4}$

ನೂರರಿಂದ ಆರು ನೂರು ಕೋಟಿ ರೂಪಾಯಿ ವೆಚ್ಚ ತಗಲಬಹುದು ಎಂಬ ಅಭಿಪ್ರಾಯವನ್ನು ನಾನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಆಡಳಿತ ಸೌಧವೆನ್ನುವುದು ಕೇವಲ ಇಟ್ಟಿಗೆ,
$\frac{1}{2}$ ಗಾರೆಯಿಂದ ಕೂಡಿ/ರಬಾರದು ಅದು ಎಲ್ಲ ದೃಷ್ಟಿಯಿಂದಲೂ ನಮ್ಮ ಪರಂಪರೆ, ಸಂಸ್ಕೃತಿಯ ಪ್ರತಿಬಿಂಬವಾಗಬೇಕು ಎನ್ನುವುದು ಅವರ ಬಲವಾದ ನಂಬಿಕೆಯಾಗಿತ್ತು. ವಜ್ರ ಮಹೋತ್ಸವವನ್ನು ಅರ್ಥಪೂರ್ಣವಾಗಿ ಈ ಮೊದಲೇ
$\frac{3}{4}$ ನಡೆಸಬೇಕಾಗಿತ್ತು. ತಡವಾ/ಗಿಯಾದರೂ ಆಚರಿಸುತ್ತಿರುವುದು ಶ್ಲಾಘನೀಯ.

ಇನ್ನೂ ಬಡವರಿಗೆ ವಿತರಿಸಲು ದಾಸ್ತಾನು ಮಾಡಿದ್ದ ಸಾವಿರಾರು ಚೀಲ ಅಕ್ಕಿ, ಬೇಳೆಕಾಳು ಹಾಳಾಗಿರುವುದು ತಿಳಿದುಬಂದಿರುತ್ತದೆ.
6 ನಿಜಕ್ಕೂ ಇದೊಂದು ನಾಚಿಕೆಗೇಡಿನ ಸಂಗತಿ.X ಬಡವರಿಗೆ ಕೊಡುವ ಧಾನ್ಯಗಳನ್ನು ಕಾಪಾಡಬೇಕು ಎನ್ನುವ ಪ್ರಜ್ಞೆ ಇಲ್ಲದ ಮಂದಿ ಸರ್ಕಾರಿ ಸೇವೆ ಮಾಡುವುದಕ್ಕೆ ಯೋಗ್ಯರಾಗಿರುವುದಿಲ್ಲ. ಈ ಗಂಭೀರ ಲೋಪಕ್ಕೆ ಕಾರಣವಾಗಿರುವವರನ್ನು ಕೂಡಲೇ ಕೆಲಸದಿಂದ ವಜಾ ಮಾ/ಡಿದರೆ ಒಳ್ಳೆಯದು. $\frac{1}{4}$

ಇತ್ತೀಚೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಪ್ರತಿ ತಿಂಗಳು ಪಡಿತರ ಧಾನ್ಯಗಳನ್ನು ನೀಡುತ್ತಿತ್ತು. ಆದರೆ ಈ
ತಿಂಗಳಿನಿಂದ ಅಂಗನವಾಡಿ ಕೇಂದ್ರಗ/ಳಿಗೆ $\frac{1}{2}$
ಹೋಗಿ ಊಟ ಮಾಡಿಕೊಂಡು ಬನ್ನಿ ಎಂದು ಹೇಳುತ್ತಿದೆ. ಆದರೆ ನಿತ್ಯ ಇವರನ್ನು ಅಂಗವಾಡಿಗಳಿಗೆ ಕರೆದುಕೊಂಡು ಹೋಗುವುದು ದೊಡ್ಡ ತಾಪತ್ರಯವಾಗಿದೆ. ಹಾಗೂ ಅಂಗನವಾಡಿಯಲ್ಲಿ ತಯಾರಿಸುವ ಆಹಾರ
ರುಚಿಸುತ್ತಿಲ್ಲ/ ಆದ್ದರಿಂದ ಈ ಹೊಸ $\frac{3}{4}$
ಪದ್ಧತಿಯನ್ನು ರದ್ದುಗೊಳಿಸಿ ಈ ಹಿಂದೆ ವಿತರಿಸುತ್ತಿದ್ದಂತೆಯೇ ಆಹಾರ ಧಾನ್ಯಗಳನ್ನು ವಿತರಿಸಬೇಕು ಸರ್ಕಾರ ಈ ಕೂಡಲೇ ಗಮನಹರಿಸಬೇಕೆಂದು ಹೇಳುತ್ತೇನೆ.

ಇಂತಿ ನಿಮ್ಮ

ಧನಂಜಯಕುಮಾರ್X 7